2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂ: 164/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾ. ಹರ್ಷಿತ್ | ಪಿಡಬ್ಲೂ - 03 |
| ತಂದೆಯ ಹೆಸರು | - | ಲೇ ಶಶಿಧರ ಬಿ.ಎಸ್. | ಸಿಡಬ್ಲೂ - 10 |
| ವಯಸ್ಸು | - | 34 ವರ್ಷ | |
| ಉದ್ಯೋಗ | - | ವೈದ್ಯರು, ಹಿರಿಸಾವೆ ಸಮುದಾಯ ಆರೋಗ್ಯ ಕೇಂದ್ರ, ಚೆನ್ನರಾಯಪಟ್ಟಣ ತಾ. | |
| ವಾಸ ಸ್ಥಳ | - | ಚೆನ್ನರಾಯಪಟ್ಟಣ ತಾ. | |

ದಿನಾಂಕ: **23.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. 2017 ರಿಂದ 2024 ರವರೆಗೆ ಕಡೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯನಾಗಿ ಕೆಲಸ ಮಾಡಿದ್ದೇನೆ.

2. ದಿ: 24.04.2019 ರಂದು ರಾತ್ರಿ 10.00 ಗಂಟೆಗೆ ಪರ್ಜಾನ ಬಾನು ಕೋಂ ಮುಸ್ತಾಕ್ ಎಂಬ ಮಹಿಳೆ ಹಲ್ಲೆ ನಡೆದ ಹಿನ್ನೆಲೆಯಲ್ಲಿ ಮತ್ತು ಸೀಮೆಎಣ್ಣೆ ಸುರಿದಿದ್ದಾರೆ ಎಂಬ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಸದರಿ ಮಹಿಳೆ ಪ್ರಜ್ಞಾವಸ್ಥೆಯಲ್ಲಿದ್ದಳು, ಅವಳ ತಲೆ ಕೂದಲು ಮತ್ತು ಬಟ್ಟೆಯಿಂದ ಸೀಮೆಎಣ್ಣೆ ವಾಸನೆ ಬರುತ್ತಿತ್ತು. ನಾನು ಸದರಿ ಮಹಿಳೆಯನ್ನು ಪರೀಕ್ಷಿಸಿದಾಗ ಆಕೆಯ ಕತ್ತಿನ ಮೇಲೆ 2 x 1 ಸೆಂಮಿ ಅಳತೆಯ ತರಚಿದ ಗಾಯ ಕಂಡುಬಂದಿತ್ತು. ನಾನು ಗಾಯಾಳುವನ್ನು ಪರೀಕ್ಷಿಸಿ ನೀಡಿದ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

3. ನಾನು ಈ ಬಗ್ಗೆ ಕಡೂರು ನಗರ ಠಾಣೆಗೆ ನೀಡಿದ ಮಾಹಿತಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.10 ಎಂದು ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಎಂ.ಎಲ್.ಸಿ. ರಿಜಿಸ್ಟರಿನ ದೃಢೀಕೃತ ಪ್ರತಿಯನ್ನು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ. 11(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲು:ಶ್ರೀ.ಕೆ.ಎಸ್.ಎಸ್.ಪಿ., ವಕೀಲರಿಂದ ಆರೋಪಿತ ಪರವಾಗಿ:</u>

4. ಗಾಯಾಳುವಿನ ಜೊತೆಗೆ ಆಸ್ಪತ್ರೆಗೆ ಬಂದ ಸಹಾಯಕರ ಹೆಸರನ್ನು ನಿಪಿ.9 ರಲ್ಲಿ ನಮೂದಿಸಿಲ್ಲ. ಗಾಯಾಳು ಯಾರು ಹಲ್ಲೆ ನಡೆಸಿದರು ಎಂದು ಹೇಳಿರುವುದಿಲ್ಲ. ಗಾಯಾಳು ಯಾವ ಸ್ಥಳದಲ್ಲಿ ಹಲ್ಲೆ ನಡೆಯಿತು ಎಂದು ತಿಳಿಸಿದ್ದಾರೆ ಎಂದು ನಿಪಿ.9 ರಲ್ಲಿ ನಮೂದಿಸಿಲ್ಲ. ಗಾಯಾಳುವನ್ನು ಗುರುತಿಸಬಹುದಾದ ಚಿಹ್ನೆಗಳನ್ನು ನಿಪಿ.9 ರಲ್ಲಿ ನಮೂದಿಸಿಲ್ಲ. ನಾನು ಪೋಲೀಸರನ್ನು ಆಸ್ಪತ್ರೆಗೆ ಕರೆಸಿರಲಿಲ್ಲ, ಆದರೆ ಪೋಲೀಸರಿಗೆ ಮಾಹಿತಿ ನೀಡಿದ್ದೆ. ಗಾಯಾಳುವಿನ ತಲೆಕೂದಲು ಮತ್ತು ಬಟ್ಟೆಯಿಂದ ಸೀಮೆಎಣ್ಣೆ ವಾಸನೆ ಬರುತ್ತಿದ್ದು ಈ ಬಗ್ಗೆ ಪರೀಕ್ಷೆಗೆ ಒಳಪಡಿಸಿರುವುದಿಲ್ಲ. ಗಾಯಾಳು ಧರಿಸಿದ ಬಟ್ಟೆಯನ್ನು ನಮ್ಮ ಆಸ್ಪತ್ರೆಯಲ್ಲಿ ಸಂಗ್ರಹಿಸಿರಲಿಲ್ಲ.

5. ನಿಪಿ.9 ರಲ್ಲಿ ಗಾಯದ ಅವಧಿ ನಮೂದಿಸಿಲ್ಲ. ನಿಪಿ.9 ರಲ್ಲಿ ಹೇಳಿದ ತರಚಿದ ಗಾಯ ಒಂದು ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ಮಗುವನ್ನು ಆಡಿಸುವಾಗ ಮಗುವಿನ ಉಗುರು ತಾಗಿದಲ್ಲಿ ನಿಪಿ.9 ರಲ್ಲ ಹೇಳಿದ ತರಚಿದ ಗಾಯ ಆಗುವ ಸಾಧ್ಯತೆ ಇದೆ. ನಾನು ಹೇಳುವಂತೆ ಗಾಯಾಳು ಚಿಕಿತ್ಸೆಗಾಗಿ ಬಂದಿಲ್ಲ ಎಂದರೆ ಸರಿಯಲ್ಲ.

6. ತನಿಖಾಧಿಕಾರಿಯ ಕೋರಿಕೆ ಮೇರೆಗೆ ಸುಳ್ಳು ದಾಖಲೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ